"ಮಧುರ ಮಕ್ಕಳೇ- ಆತ್ಮ ಮತ್ತು ಪರಮಾತ್ಮನ ಯಥಾರ್ಥ ಜ್ಞಾನವು ನಿಮ್ಮ ಬಳಿ ಇದೆ, ನೀವು ಶಿವಶಕ್ತಿಯರಾಗಿದ್ದೀರಿ ಆದ್ದರಿಂದ ನೀವು (ಸವಾಲ್) ಲಲ್ಕಾರ್ ಮಾಡಬೇಕಾಗಿದೆ"

ಪ್ರಶ್ನೆ: ಎಲ್ಲದಕ್ಕಿಂತ ಉನ್ನತ ಗುರಿ ಯಾವುದಾಗಿದೆ, ಅದಕ್ಕಾಗಿಯೇ ನೀವು ಮಕ್ಕಳು ಪುರುಷಾರ್ಥ ಮಾಡುತ್ತಿದ್ದೀರಿ?

ಉತ್ತರ: ನಿರಂತರ ನೆನಪಿನಲ್ಲಿ ಇರುವುದೇ ಎಲ್ಲದಕ್ಕಿಂತ ಮ ಗುರಿಯಾಗಿದೆ. ನೆನಪಿನಿಂದಲೇ ಕರ್ಮಬೋಗವು ಸಮಾಪ್ತಿಯಾಗಿ ಕರ್ಮಾತೀತ ಸ್ಥಿತಿಯಾಗುವುದು. ಯಾವ ತಂದೆ-ತಾಯಿಯಿಂದ ಅಪಾರ ಸುಖವು ಸಿಗುತ್ತದೆಯೋ ಅವರಿಗಾಗಿಯೇ ಮಕ್ಕಳು ಬಾಬಾ, ನಿಮ್ಮ ನೆನಪು ಮರೆತುಹೋಗುತ್ತದೆ ಎಂದು ಹೇಳುತ್ತಾರೆ. ಆಶ್ಚರ್ಯವಾಗಿದೆಯಲ್ಲವೆ! ದೇಹಿ ಅಭಿಮಾನಿಯಾಗಿರುವ ಪುರುಷಾರ್ಥ ನಡೆಯುತ್ತಿದ್ದಾಗ ನೆನಪು ಮರೆತು ಹೋಗಲು ಸಾಧ್ಯವಿಲ್ಲ.

ಗೀತೆ: ಯಾರು ಈ ಎಲ್ಲಾ ಆಟವನ್ನು......

ಓಂ ಶಾಂತಿ. ಭಗವಾನುವಾಚ - ಮಕ್ಕಳು ತಂದೆಯಾದ ಭಗವಂತನನ್ನು ಅರಿತುಕೊಂಡಿದ್ದೀರಿ, ಈಗ ಬಂದು ತಂದೆಯ ಮೂಲಕ ಆಸ್ತಿಕರಾಗಿದ್ದೀರಿ. ಏಕೆಂದರೆ ತಂದೆಯ ಮುಖಾಂತರ ತಂದೆಯನ್ನು ಅರಿತಿದ್ದೀರಿ ಆದ್ದರಿಂದ ಆಸ್ತಿಕರೆಂದು ಕರೆಸಿಕೊಳ್ಳುತ್ತೀರಿ. ಅವಶ್ಯವಾಗಿ ನಾವು ಆತ್ಮಗಳಾಗಿದ್ದೇವೆ. ಅವರು ನಾವಾತ್ಮಗಳ ತಂದೆಯಾಗಿದ್ದಾರೆ ಎಂಬುದನ್ನು ಅರಿತಿದ್ದೀರಿ. ಭಲೆ ಯಾವುದೇ ಮನುಷ್ಯರು ತಮ್ಮನ್ನು ಆತ್ಮನೆಂದು ತಿಳಿದುಕೊಳ್ಳಬಹುದು ಆದರೆ ಪರಮಾತ್ಮನನ್ನು ತಿಳಿದುಕೊಂಡಿಲ್ಲ. ಯಾವಾಗ ಸ್ವಯಂ ತಂದೆಯೇ ಬಂದು ಮಕ್ಕಳಿಗೆ ಜನ್ಮ ನೀಡುತ್ತಾರೆ ಮತ್ತು ಅವರಿಗೆ ತಮ್ಮ ಪರಿಚಯ ಕೊಡುತ್ತಾರೋ ಆಗಲೇ ಮಕ್ಕಳೂ ಅರಿತುಕೊಳ್ಳುತ್ತಾರೆ. ತಂದೆಯೇ ತನ್ನ ಪರಿಚಯವನ್ನು ಕೊಡಬೇಕಾಗಿದೆ ಅವರು ಎಲ್ಲಾ ಆತ್ಮಗಳ ತಂದೆಯಾಗಿದ್ದಾರೆ. ಸಮ್ಮುಖದಲ್ಲಿ ಬಂದು ತಿಳಿಸುತ್ತಾರೆ-ನೀವಾತ್ಮಗಳಾಗಿದ್ದೀರಿ, ನಾನು ನೀವಾತ್ಮಗಳ ಪರಮಪಿತನಾಗಿದ್ದೇನೆ. ನೀವು ನಿಶ್ಚಯ ಮಾಡುತ್ತೀರಿ. ಇದಂತೂ ಸಾಮಾನ್ಯ ಮಾತಾಗಿದೆ. ಆತ್ಮಗಳ ತಂದೆಯು ಅವಶ್ಯವಾಗಿ ಇದ್ದಾರೆ ಗಾಯನವೂ ಇದೆ - ಆತ್ಮಗಳು ಮತ್ತು ಪರಮಾತ್ಮ ಬಹಳಕಾಲ ಅಗಲಿಹೋಗಿದ್ದರು.. ತಂದೆಯನ್ನು ಮಕ್ಕಳೇ ಅರಿತುಕೊಳ್ಳುತ್ತಾರೆ ತಂದೆಯು 5000 ಸಾವಿರ ವರ್ಷಗಳ ನಂತರ ಪುನಃಬಂದಿದ್ದಾರೆ ಯಾವಾಗ ಎಲ್ಲಾ ಮಕ್ಕಳು ನಾಸ್ತಿಕ, ದುಃಖಿಯಾಗಿಬಿಡುತ್ತಾರೆ, ಒಬ್ಬರು ಆಸ್ತಿಕರು ಇರುವುದಿಲ್ಲವೋ ಆಗ ತಂದೆಯು ಬರುತ್ತಾರೆ. ಆಸ್ತಿಕರನ್ನಾಗಿ ಮಾಡಿ ಮತ್ತೆ ಮರೆಯಾಗಿಬಿಡುತ್ತಾರೆ. ನಂತರ ಮತ್ಯಾರೂ ತಂದೆಯನ್ನು ಅರಿಯಲಾರರು. ಈಗ ನೀವು ಮಕ್ಕಳಲ್ಲಿ ನಂಬರ್ವಾರ್ ಪುರುಷಾರ್ಥದನುಸಾರ ಈ ನಿಶ್ಚಯವಿದೆ. ಎಲ್ಲರಿಗೂ ಪೂರ್ಣ ನಿಶ್ಚಯವಿಲ್ಲ. ಭಲೇ ಇಲ್ಲಿ ಸಮ್ಮುಖದಲ್ಲಿ ಕುಳಿತಿದ್ದಾರೆ, ಪರಮಪಿತ ಪರಮಾತ್ಮ ಪತಿತ-ಪಾವನ ತಂದೆಯೇ ಪತಿತರಿಂದ ಪಾವನ ದೇವತೆಗಳನ್ನಾಗಿ ಮಾಡುತ್ತಿದ್ದಾರೆ ಎಂದು ಗೊತ್ತಿದೆ. ಇಲ್ಲಿ ಕೇವಲ ದೇವತೆಗಳ ಮೂರ್ತಿಗಳಿದೆ. ಚೈತನ್ಯವಾಗಿಯಂತೂ ಇಲ್ಲ. ಯಾರೆಲ್ಲಾ ಮನುಷ್ಯರಿದ್ದಾರೆಯೋ ನೀವು ಬ್ರಾಹ್ಮಣರ ವಿನಃ ಮತ್ಯಾರೂ ಆತ್ಮ ಮತ್ತು ಪರಮಾತ್ಮನನ್ನು ಅರಿತುಕೊಂಡಿಲ್ಲ. ನಾವಾತ್ಮರೇ ಪರಮಾತ್ಮನೆಂದು ಹೇಳಿರುವ ಕಾರಣ ಆತ್ಮನನ್ನಾಗಲಿ ಪರಮಾತ್ಮನನ್ನಾಗಲಿ ತಿಳಿದುಕೊಂಡಿಲ್ಲ. ನೀವು ಮಕ್ಕಳಿಗೆ ಗೊತ್ತಿದೆ - ತಮ್ಮನ್ನು ಯಥಾರ್ಥ ರೀತಿಯಲ್ಲಿ ಆತ್ಮನೆಂದು ತಿಳಿದು ತಮ್ಮ ತಂದೆಯನ್ನು ಪರಮಾತ್ಮನೆಂದು ತಿಳಿಯುವವರು ಒಬ್ಬರೂ ಸಹ ಇಲ್ಲ ಆದರೆ ಈಗ ಈ ಲಲ್ಕಾರ್ ಯಾರು ಮಾಡುವುದು? ಶಕ್ತಿಯರೇ ಲಲ್ಕಾರ್ ಮಾಡಿದ್ದರು ಆ ಶಕ್ತಿಯು ಇನ್ನೂ ಬಂದಿಲ್ಲ ಅದು ನಿಮ್ಮಲ್ಲಿ ಬರಬೇಕಾಗಿದೆ. ಶಿವಶಕ್ತಿಯರಂತೂ ಪ್ರಸಿದ್ಧವಾಗಿದ್ದಾರೆ. ಜಗದಂಬಾರವರೂ ಶಕ್ತಿಯಾಗಿದ್ದಾರೆ, ಈಗ ಸಮ್ಮೇಳನದಲ್ಲಿ ಧರ್ಮಪಿತರುಗಳೆಲ್ಲರೂ ಬರುತ್ತಾರೆ, ಅವರಿಗೂ ತಿಳಿಸಬೇಕಾಗಿದೆ.

ತಂದೆಯು ತಿಳಿಸುತ್ತಾರೆ - ಮಕ್ಕಳೇ, ನೀವಂತೂ ಆತ್ಮಾಭಿಮಾನಿಗಳಾಗಬೇಕಾಗಿದೆ. ಒಂದುವೇಳೆ ನಾವಾತ್ಮಗಳಾಗಿದ್ದೇವೆ, ಪರಮಪಿತ ಪರಮಾತ್ಮನಿಂದ ಆಸ್ತಿಯನ್ನು ಪಡೆಯುತ್ತಿದ್ದೇವೆ ಎನ್ನುವ ನಿಶ್ಚಯವಿಲ್ಲ, ಯಾವುದೇ ಸಂಶಯವಿದ್ದರೆ ಶ್ರೇಷ್ಠಪದವಿಯನ್ನು ಪಡೆಯಲು ಸಾಧ್ಯವಿಲ್ಲ. ಒಳ್ಳೊಳ್ಳೆಯ ಮಕ್ಕಳೂ ಸಹ ನಡೆಯುತ್ತಾ-ನಡೆಯುತ್ತಾ ಮಾಯೆಯ ಬಿರುಗಾಳಿಯು ಬಂದಾಗ ಕೆಳಗೆ ಬೀಳುತ್ತಾರೆ. ನಿಶ್ಚಯ ಬುದ್ಧಿಯವರಿಂದ ಸಂಶಯ ಬುದ್ಧಿಯವರಾಗಿಬಿಡುತ್ತಾರೆ. ಇಲ್ಲವೆಂದರೆ ಮಕ್ಕಳು ಸಹ ಇವರು ನಮ್ಮ ತಂದೆಯಲ್ಲವೆಂದು ಸಂಶಯ ಬುದ್ಧಿಯವರಾಗುವುದಿಲ್ಲ. ಇಲ್ಲಿ ಇದು ವಿಚಿತ್ರವಾಗಿದೆ. ಪರಮಪಿತ ಪರಮಾತ್ಮ ನಾವೆಲ್ಲಾ ಆತ್ಮಗಳ ತಂದೆಯಾಗಿದ್ದಾರೆ, ಅವರು ನಮಗೆ ಓದಿಸುತ್ತಾರೆ ಎಂಬುದನ್ನೂ ಹೇಳುತ್ತಾರೆ ಆದರೂ ಸಹ ಮರೆತುಹೋಗುತ್ತಾರೆ. ಪ್ರತಿನಿತ್ಯ ತಂದೆಯು ತಿಳಿಸುತ್ತಿರುತ್ತಾರೆ - ಮಕ್ಕಳೇ, ತಮ್ಮ ತಂದೆಯನ್ನು ನೆನಪು ಮಾಡಿದರೆ ನಿಮ್ಮ ವಿಕರ್ಮಗಳು ವಿನಾಶವಾಗುತ್ತದೆ. ಜನ್ಮ-ಜನ್ಮಾಂತರದ ವಿಕರ್ಮಗಳಂತೂ ತಲೆಯ ಮೇಲೆ ಬಹಳ ಇದೆ ನಿಮಗೆ ಗೊತ್ತಿದೆ, ಮಮ್ಮಾ-ಬಾಬಾ ಯಾರನ್ನು ಬ್ರಹ್ಮಾ-ಸರಸ್ವತಿ ಎಂದು ಹೇಳುತ್ತೀರಿ ಅವರು ನಂಬರ್ವನ್ನಲ್ಲಿ ಇದ್ದಾರೆ. ಅವರೂ ಸಹ ಹೇಳುತ್ತಾರೆ ಇಷ್ಟು ಯೋಗ ಮಾಡುತ್ತೇವೆ, ಇಷ್ಟೊಂದು ಪರಿಶ್ರಮ ಪಡುತ್ತೇವೆ ಆದರೂ ಸಹ ಇಷ್ಟು ಪಾಪಗಳು ಭಸ್ಮವಾಗಿಲ್ಲ. ಒಂದಲ್ಲ

ಒಂದನ್ನು ಭೋಗಿಸಬೇಕಾಗುತ್ತದೆ. ಅಂತ್ಯದಲ್ಲಿ ಇವೆಲ್ಲವುದರಿಂದ ಮುಕ್ತವಾಗಿ ಕರ್ಮಾತೀತ ಸ್ಥಿತಿಯನ್ನು ಪಡೆಯಬೇಕಾಗಿದೆ, ಪುರುಷಾರ್ಥ ಮಾಡಬೇಕಾಗಿದೆ. ಮಾಯೆಯು ಸಹ ಕಡಿಮೆ ಶಕ್ತಿಶಾಲಿಯೇನಲ್ಲ, ಇಬ್ಬರೂ ಸರ್ವ ಶಕ್ತಿವಂತರು ಆಗಿದ್ದಾರೆ. ರಾವಣ ಮಾಯೆಯು ಎಲ್ಲಾ ಮನುಷ್ಯ ಮಾತ್ರರನ್ನು ಪತಿತರನ್ನಾಗಿ ಮಾಡಿಬಿಟ್ಟಿದೆ. ಪತಿತ-ಪಾವನನೆಂದು ಚಪ್ಪಾಳೆ ತಟ್ಟುತ್ತಾ ಹಾಡುತ್ತಿರುತ್ತಾರೆ ಅಂದಮೇಲೆ ಅವಶ್ಯವಾಗಿ ಪತಿತರಾಗಿದ್ದಾರಲ್ಲವೆ ಆದರೆ ನಾವು ಪತಿತರಾಗಿದ್ದೇವೆಂದು ತಿಳಿದುಕೊಳ್ಳುವುದಿಲ್ಲ. ಈಗ ಇದನ್ನು ತಿಳಿಸುವುದೂ ಸಹ ಅವಶ್ಯಕತೆಯಿದೆ, ಈಗ ಇದು ಪತಿತ ಪ್ರಪಂಚವಾಗಿದೆ, ಪಾವನ ಪ್ರಪಂಚವೆಂದು ಸತ್ಯಯುಗಕ್ಕೆ ಹೇಳಲಾಗುತ್ತದೆ. ಪಾವನ ಪ್ರಪಂಚದಲ್ಲಿ ಹೀಗೆ ಪತಿತ-ಪಾವನನನ್ನು ಕರೆಯುವುದಿಲ್ಲ. ಅಲ್ಲಿ ಭಾರತ ಸುಖಿಯಾಗಿತ್ತು ಒಂದೇ ಧರ್ಮವಿತ್ತು ಈಗ ನಿಮ್ಮಗೆ ಗೊತ್ತಿದೆ ಪರಮಾಪಿತ ಪರಮಾತ್ಮ ಜ್ಞಾನಸಾಗರನಾಗಿದ್ದಾರೆ, ಅವರು ಈ ಎಲ್ಲಾ ವೇದ ಶಾಸ್ತ್ರ ಮುಂತಾದುವುಗಳ ರಹಸ್ಯವನ್ನು ಅರಿತ್ತಿದ್ದಾರೆ, ಅವರೇ ಓದಿಸುತ್ತಾರೆ. ಆದರೆ ಮತ್ತೆ ಕೆಲವರುಇದ್ದಾರೆ, ನಮಗೆ ಪರಮಪಿತ ಪರಮಾತ್ಮ ಓದಿಸುತ್ತಾರೆ, ಬೇಹದ್ದಿನ ತಂದೆಯೇ ಓದಿಸುತ್ತಾರೆ ಎಂಬುದನ್ನೇ ಮರೆತುಬಿಡುತ್ತಾರೆ. ಆ ನಶೆ ಏರುವುದಿಲ್ಲ. ಇಲ್ಲಿಂದ ಹೊರಗಡೆ ಮನೆಗೆ ಹೋದಾಗ ನಶೆಯು ಸಮಾಪ್ತಿಯಾಗಿಬಿಡುತ್ತದೆ. ಕೆಲವರಷ್ಟೇ ವಿರಳವಾಗಿ ಯೋಗಯುಕ್ತ ಪುರುಷಾರ್ಥ ಮಾಡುತ್ತಾರೆ. ಮಾಯೆಯೂ ಶಕ್ತಿಶಾಲಿಯಾಗಿದೆ, ದೇಹಾಭಿಮಾನವಂತೂ ನಂಬರ್ವನ್ ಆಗಿದೆ ಆದ್ದರಿಂದ ತಂದೆಯು ತಿಳಿಸುತ್ತಾರೆ - ತಮ್ಮನ್ನು ಆತ್ಮನೆಂದುತಿಳಿಯಿರಿ - ನಾವಾತ್ಮಗಳಾಗಿದ್ದೇವೆ, ಈ ಶರೀರದ ಮುಖಾಂತರ ನಾವು ಕರ್ಮವನ್ನು ಮಾಡುತ್ತೇವೆ. ತಮ್ಮನ್ನು ಎಂದೂ ಪರಮಾತ್ಮನೆಂದು ತಿಳಿಯಬಾರದು. ತಂದೆಯು ತಿಳಿಸುತ್ತಾರೆ- ನಾನು ನಿಮ್ಮನ್ನು ಪತಿತರಿಂದ ಪಾವಾನ ಮಾಡಲು ಬಂದಿದ್ದೇನೆ, ನನ್ನನ್ನು ಘಳಿಗೆ-ಘಳಿಗೆಯೂ ನೆನಪು ಮಾಡಿ ಆದರೆ ಒಳ್ಳೊಳ್ಳೆಯ ಮಕ್ಕಳು ಸಹ ನೆನಪು ಮಾಡುವುದಿಲ್ಲ ಮತ್ತು ಸತ್ಯವಾಗಿಯೂ ತಿಳಿಸುವುದಿಲ್ಲ. ಚಾರ್ಟ್ನ್ನು ಬರೆದು ಕಳುಹಿಸುತ್ತಾರೆ ಅದರಲ್ಲಿಯೂ ಅಸತ್ಯವಿರುತ್ತದೆ. ಸತ್ಯವಾದ ಚಾರ್ಟ್ನ್ನು ಬರೆಯುವುದಿಲ್ಲ ಆದ್ದರಿಂದ ತಂದೆಯು ತಿಳಿಸುತ್ತಾರೆ - ತಮ್ಮನ್ನು ಆತ್ಮನೆಂದು ತಿಳಿಯಿರಿ, ನಾನಾತ್ಮ 84 ಜನ್ಮಗಳನ್ನು ಪೂರ್ಣ ಮಾಡಿ ಈಗ ತಂದೆಯ ಬಳಿ ಹೋಗುತ್ತೇನೆ. ಮುಂಜಾನೆ ಎದ್ದು ತಂದೆಯ ನೆನಪು ಮಾಡುವುದರಿಂದ ಅದರ ನಶೆಯು ಇಡೀ ದಿನವಿರುವುದು. ಮನುಷ್ಯರು ಹಣ ಸಂಪಾದಿಸುತ್ತಾರೆಂದರೆ ಇಂದು ಇಷ್ಟೊಂದು ಹಣ ಸಂಪಾದಿಸಿದೆವೆಂದು ನಶೆಯಿರುತ್ತದೆಯಲ್ಲವೆ. ಇದು ಸಹ ವ್ಯವಹಾರವಾಗಿದೆ, ವ್ಯಾಪಾರವಾಗಿದೆ ಅಂದರೆ ವ್ಯಾಪಾರದಲ್ಲಿ ಎಷ್ಟೊಂದು ಪರಿಶ್ರಮ ಪಡಬೇಕಾಗುತ್ತದೆ. ಮುಂಜಾನೆ ಎದ್ದು ತಮ್ಮೊಂದಿಗೆ ಮಾತನಾಡಿಕೊಳ್ಳಬೇಕು - ಈಗ ನಮ್ಮ ಪಾತ್ರವು ಪೂರ್ಣವಾಯಿತು. ಈಗ ನಾವು ಹೋದೆವೆಂದರೆ ಹೋದೆವು ನಂತರ 21 ಜನ್ಮಗಳ ಕಾಲ ರಾಜ್ಯ ಮಾಡಬೇಕು ಎಷ್ಟೊಂದು ಮಧುರ, ಎಷ್ಟೊಂದು ಪ್ರಿಯ ಅದ್ಭುತ ತಂದೆಯಾಗಿದ್ದಾರೆ. ಇಂತಹ ತಂದೆಯನ್ನು ಯಾವುದೇ ಮನುಷ್ಯ ಮಾತ್ರರೂ ತಿಳಿದುಕೊಂಡಿಲ್ಲ. ತಂದೆಯು ಬಂದು ಮಕ್ಕಳನ್ನು ತನಗಿಂತಲೂ ಉತ್ತಮ ಮಟ್ಟಕ್ಕೆ ಕರೆದುಕೊಂಡು ಹೋಗುತ್ತಾರೆ ಆದರೆ ಮಕ್ಕಳು ತಂದೆಯನ್ನು ಸರ್ವವ್ಯಾಪಿ ಎಂದು ಹೇಳಿ ತಮಗಿಂತಲೂ ಕನಿಷ್ಠ ಸ್ಥಿತಿಗೆ ತಂದಿದ್ದಾರೆ ಆದ್ದರಿಂದ ನೀವು ಬಹಳ ದುಃಖಿಯಾಗಿದ್ದೀರಿ. ನಾನು ನೀವು ಮಕ್ಕಳನ್ನು ಬ್ರಹ್ಮಾಂಡ ಮತ್ತು ಇಡೀ ವಿಶ್ವ ಎರಡಕ್ಕೂ ಮಾಲಿಕರನ್ನಾಗಿ ಮಾಡುತ್ತೇನೆ ಮತ್ತೆ ನೀವು ಮಕ್ಕಳು ತಂದೆಯಾದ ನನ್ನನ್ನು ಸರ್ವವ್ಯಾಪಿ ಎಂದು ಹೇಳಿಬಿಡುತ್ತೀರಿ ಇದೂ ಸಹ ನಾಟಕದಲ್ಲಿ ಆಟವಿದೆ. ಈಗ ತಂದೆಯು ಹೀಗೀಗೆ ತಿಳಿಸಿ ಎಂದು ಸೂಚನೆಕೊಡುತ್ತಾರೆ.

ಲಕ್ಷ್ಮಿನಾರಾಯಣ ಮುಂತಾದ ದೇವಿ-ದೇವತೆಗಳ 100% ನಿರ್ವಿಕಾರಿ ಬುದ್ಧಿಯವರಾಗಿದ್ದರು, ಈಗಿಲ್ಲ. ಅಂತರ ನೋಡಿ ಎಷ್ಟೊಂದು ಇದೆ - ಎಲ್ಲಿ ಭಾರತ ಸ್ವರ್ಗವಾಗಿತ್ತು, ಈಗ ನರಕವಾಗಿ ಬಿಟ್ಟಿದೆ. ಜ್ಞಾನವು ಯಾವುದೇ ಮನುಷ್ಯರಲ್ಲಿ ಇಲ್ಲ. ನೀವು ಮಕ್ಕಳಲ್ಲಿಯೂ ಆ ಶಕ್ತಿಯಿಲ್ಲ ಬಹಳ ದೇಹಾಭಿಮಾನವಿದೆ. ಆತ್ಮಾಭಿಮಾನಿಗಳಾಗುವ ಧಾರಣೆಯಾಗಬೇಕು. ತಂದೆಯು ಸಲಹೆ ಮಾಡುತ್ತಾರೆ - ಹೀಗೆ ಲಲ್ಕಾರ್ ಮಾಡಿ ಆತ್ಮ ಯಾರು, ಪರಮಾತ್ಮಯಾರು ಎಂದು ಯಾರಿಗೂ ಗೊತ್ತಿಲ್ಲ, ನಿಮಗೆ ಗೊತ್ತಿದೆ-ನಾವು ಆತ್ಮಗಳು ಬಿಂದುವಾಗಿದ್ದೇವೆ ನಮ್ಮ ತಂದೆ ಪರಮಾತ್ಮನೂ ಬಿಂದುವಾಗಿದ್ದಾರೆ ಅವರು ಜ್ಞಾನಸಾಗರ, ಪತಿತಪಾವನರಾಗಿದ್ದಾರೆ, ಜನನ-ಮರಣದಲ್ಲಿ ಬರುವುದಿಲ್ಲ. ನಾವು ಆತ್ಮಗಳು ಜನನ ಮರಣದಲ್ಲಿ ಬರುತ್ತೇವೆ. ಪರಮಪಿತ ಪರಮಾತ್ಮ ತಿಳಿಸುತ್ತಾರೆ - ನನ್ನ ಪಾತ್ರವು ಇದೆ ಆದ್ದರಿಂದ ನಾನು ಬರುತ್ತೇನೆ. ನಿಮ್ಮೆಲ್ಲರನ್ನು ಸುಖಿಯನ್ನಾಗಿ ಮಾಡಿ ನಾನು ನಿರ್ವಾಣಧಾಮದಲ್ಲಿ ಕುಳಿತುಬಿಡುತ್ತೇನೆ. ಮನುಷ್ಯರು ವೃದ್ಧರಾದಾಗ ವಾನಪ್ರಸ್ಥದಲ್ಲಿ ಹೊರಟು ಹೋಗುತ್ತಾರೆ ಆದರೆ ಅದರ ಅರ್ಥವನ್ನು ತಿಳಿದುಕೊಂಡಿಲ್ಲ. ವಾನಪ್ರಸ್ಥವೆಂದರೆ ವಾಣಿಯಿಂದ ದೂರವಿರುವ ಸ್ಥಾನವೆಂದರ್ಥ. ಅವರೇನು ಶಬ್ಧದಿಂದ ದೂರ ಕುಳಿತುಕೊಳ್ಳುತ್ತಾರೆಯೇ! ಈಗ ಎಲ್ಲರೂ ವಾನಪ್ರಸ್ಥಿಗಳಾಗಿದ್ದಾರೆ. ನಾವಾತ್ಮಾರು ಶಬ್ಧದಿಂದ ದೂರವಿರುವವರಾಗಿದ್ದೇವೆ ಆದರೆ ಆ ಸ್ಥಾನವನ್ನೂ ಸಹ ಯಾರೂ ತಿಳಿದುಕೊಂಡಿಲ್ಲ. ನಿಮ್ಮಲಿಯೂ ಸಹ ಕೆಲವರ ಬುದ್ಧಿಯಲ್ಲಿ ಮಾತ್ರ ಈ ಮಾತುಗಳಿವೆ. ದೇಹಾಭಿಮಾನವು ಬಹಳ ಇದೆ. ತಂದೆಯನ್ನು ಅನುಸರಣೆ ಮಾಡುವುದಿಲ್ಲ. ಮಾಯೆಯೂ ಸಹ ಬಹಳ ಪ್ರಬಲವಾಗಿದೆ. ಆತ್ಮ ಮತ್ತು ಪರಮಾತ್ಮನ ಸಂಬಂಧವನ್ನು ಯಾರೂ ತಿಳಿದುಕೊಂಡಿಲ್ಲ. ತಂದೆಯ ಸಂಬಂಧವನ್ನೇ ತಿಳಿದುಕೊಂಡಿಲ್ಲ. ನೀವೂ ಸಹ ಘಳಿಗೆ-ಘಳಿಗೆಯೂ ಮರೆತುಹೋಗುತ್ತೀರಿ. ತಂದೆಯ ಮಕ್ಕಳಾಗಿ ತಂದೆಯನ್ನು ಪೂರ್ಣ ನೆನಪು ಮಾಡಬೇಕಲ್ಲವೆ. ಹೇಳುತ್ತಾರೆ ಬಾಬಾ, ನಾನು ಘಳಿಗೆ-ಘಳಿಗೆಯೂ ನೆನಪು ಮಾಡುವುದನ್ನು ಮರೆತುಹೋಗುತ್ತೇನೆ! ಅರೇ, ನೀವು ಮಾತಾ-ಪಿತರನ್ನು ನೆನಪು ಮಾಡುವುದನ್ನು ಮರೆತುಹೋಗುವಿರಾ! ನಿರಂತರ ನೆನಪು ಮಾಡುವುದೇ ಗುರಿಯಾಗಿದೆ, ಅಂದಮೇಲೆ ಯಾವ ತಂದೆ-ತಾಯಿಯಿಂದ ಸ್ವರ್ಗದ ಆಸ್ತಿಯನ್ನು ಪಡೆಯುತ್ತಿರುವಿರೋ ಅವರನ್ನೇ ಮರೆತುಹೋಗುವಿರಾ! ಆಶ್ಚರ್ಯವಾಗಿದೆ.

ತಂದೆ-ತಾಯಿಯಂತೂ ಒಬ್ಬರೇ ಆಗಿದ್ದಾರೆ. ತಂದೆಯು ತಿಳಿಸುತ್ತಾರೆ - ನಾನೇ ನಿಮ್ಮ ತಾಯಿ-ತಂದೆ ಯಾಗಿದ್ದೇನೆ. ಇವು ಬಹಳ ಗುಹ್ಯವಾದ ಮಾತಾಗಿದೆ. ಕೆಲವರು ಜಗದಂಬಾ ತಾಯಿಯಾಗಿದ್ದಾರೆಂದು ತಿಳಿಯುತ್ತಾರೆ ಆದರೆ ಇಲ್ಲ, ಅವರಂತೂ ಸಾಕಾರಿಯಾಗಿದ್ದಾರಲ್ಲವೇ. ನೀವು ನಿರಾಕಾರನಿಗೆ ತಂದೆ-ತಾಯಿ ಎಂದು ಹೇಳುತ್ತೀರಿ. ಇವೆಲ್ಲಾ ಮಾತುಗಳನ್ನು ಮೊದಲು ತಿಳಿಸುತ್ತಿರಲಿಲ್ಲ. ದಿನ-ಪ್ರತಿದಿನ ಗುಹ್ಯಮಾತುಗಳನ್ನು ತಿಳಿಸಲಾಗುತ್ತದೆ. ಯಾವುದೇ ಮಾತನ್ನು ನಿಮಗೆ ತಿಳಿಸಿಕೊಡಲಾಗದಿದ್ದರೆ ಹೇಳಿ -ಬಾಬಾ ನಮಗೆ ಇನ್ನೂ ತಿಳಿಸಿಲ್ಲ, ತಂದೆಯೊಂದಿಗೆ ಕೇಳುತ್ತೇವೆ ಎಂದು ಹೇಳಿ. ದಿನ-ಪ್ರತಿದಿನ ಹೊಸ-ಹೊಸ ವಿಷಯಗಳಂತೂ ಸಿಗುತ್ತಿರುತ್ತದೆ. ಜ್ಞಾನವಂತೂ ಬಹಳ ದೊಡ್ಡದಾಗಿದೆ. ತಿಳಿದುಕೊಳ್ಳುವವರು ತಿಳಿದುಕೊಳ್ಳಬಹುದು. ಓದುತ್ತಾ-ಓದುತ್ತಾ ಸುಸ್ತಾಗಿಬಿಡುತ್ತಾರೆ ನಂತರ ಬಾಬಾ ನಾನು ನಡೆಯಲಾಗುವುದಿಲ್ಲ, ಸುಸ್ತಾಗಿದ್ದೇನೆ ಎಂದು ತಂದೆಗೆ ಪತ್ರ ಬರೆಯುತ್ತಾರೆ, ವಿದ್ಯೆಯನ್ನೇ ಬಿಟ್ಟುಬಿಡುತ್ತಾರೆ. ವಿಕಾರದಲ್ಲಿ ಹೋಗುತ್ತಾರೆಂದರೆ ವಿದ್ಯೆಯು ಬಿಟ್ಟುಹೋಗುತ್ತದೆ. ಈ ವಿದ್ಯೆಯು ಬ್ರಹ್ಮಚರ್ಯದ ಧಾರಣೆಯಿಂದಲೇ ಆಗುವುದು. ಒಂದುವೇಳೆ ಬ್ರಹ್ಮಚರ್ಯವನ್ನು ಬಿಟ್ಟರೆ ಧಾರಣೆಯಾಗಲು ಸಾಧ್ಯವಿಲ್ಲ. ಕಾಮಮಹಾಶತ್ರುವೆಂದು ಅನ್ಯರಿಗೆ ತಿಳಿಸಲು ಆಗುವುದೇ ಇಲ್ಲ. ಬುದ್ಧಿಯ ಬೀಗವೇ ಬಂದ್ ಆಗಿಬಿಡುತ್ತದೆ. ಬಹಳ ಉನ್ನತ ಗುರಿಯಾಗಿದೆ. ಸನ್ಯಾಸಿಗಳಂತೂ ಗೃಹಸ್ಥ ಧರ್ಮವನ್ನು ಬಿಟ್ಟು ಓಡಿಹೋಗುತ್ತಾರೆ, ಅವರು ಹಠಯೋಗಿ ಸನ್ಯಾಸ. ಇದು ರಾಜಯೋಗ, ತಂದೆಯೇ ಬಂದು ರಾಜಯೋಗ ಕಲಿಸುತ್ತಾರೆ, ಹಠಯೋಗಿ ಎಂದೂ ರಾಜಯೋಗ ಕಲಿಸಲು ಸಾಧ್ಯವಿಲ್ಲ. ಈ ಮಾತು ಪೂರ್ಣರೀತಿಯಲ್ಲಿ ತಿಳಿಸುವ ರೀತಿ ಇನ್ನೂ ಬಂದಿಲ್ಲ.ಅವರದಾಗಿದೆ ಹಠಯೋಗ ಸನ್ಯಾಸ. ಅವರು ಪತಿತರನ್ನು ಪಾವನ ಮಾಡಲು ಸಾಧ್ಯವಿಲ್ಲ. ನಿಮ್ಮದು ಬೇಹದ್ದಿನ ಸನ್ಯಾಸ, ಅವರದು ಹದ್ದಿನ ಸನ್ಯಾಸವಾಗಿದೆ. ನಮ್ಮ 84 ಜನ್ಮಗಳು ಪೂರ್ಣವಾಯಿತು. ಈಗ ನಾವು ಹಿಂತಿರುಗಿ ಹೋಗುತ್ತೇವೆಂದು ನಿಮ್ಮ ಬುದ್ಧಿಯಲ್ಲಿದೆ. ಈ ಬೇಹದ್ದಿನ ಸನ್ಯಾಸವನ್ನು ಬುದ್ಧಿಯಿಂದ ಮಾಡಲಾಗುತ್ತದೆ. ಅವರದು ಹಠಯೋಗ, ಕರ್ಮಸನ್ಯಾಸವಾಗಿದೆ. ನಿಮ್ಮದು ರಾಜಯೋಗ, ಕರ್ಮಯೋಗವಾಗಿದೆ. ಇದನ್ನು ಭಗವಂತನೇ ಕಲಿಸಿದ್ದಾರೆ. ಅವರದು ಹಠಯೋಗ ಮತ್ತು ಇದು ರಾಜಯೋಗವೆಂದು ಈಗ ನೀವು ಚೆನ್ನಾಗಿ ತಿಳಿಸಬಹುದು. ಶಿವತಂದೆಯನ್ನೂ ಸಹ ಯಾರು ತಿಳಿದುಕೊಂಡಿಲ್ಲ. ಹೇಗೆ ಆತ್ಮವು ಬಿಂದುವಾಗಿದೆಯೋ ಹಾಗೆಯೇ ಶಿವತಂದೆಯೂ ಸಹ ಬಿಂದುವಾಗಿದ್ದಾರೆ. ಬಿಂದುವಿನ ಗುರುತನ್ನೂ ಸಹ ಭೃಕುಟಿಯಲ್ಲಿಯೇ ಬಿಂದುವನ್ನು ತೋರಿಸಲಾಗುತ್ತದೆ. ಆತ್ಮವೂ ಸಹ ಇಲ್ಲಿಯೇ ನಿವಾಸ ಮಾಡುತ್ತದೆ ಎಂದು ಯಾರಿಗೂ ಗೊತ್ತಿಲ್ಲ. ಇಷ್ಟು ಚಿಕ್ಕ ಬಿಂದುವಿನಲ್ಲಿ 84 ಜನ್ಮಗಳ ಅವಿನಾಶಿ ಪಾತ್ರವು ಅಡಕವಾಗಿದೆ -ಇವು ಎಷ್ಟು ಆಳವಾದ ಮಾತುಗಳಾಗಿವೆ. ಯಾರಿಗೂ ತಿಳಿಸಲು ಬರುವುದಿಲ್ಲ. ವಾಸ್ತವವನ್ನು ತಿಳಿಸಬೇಕು-ಹೇಗೆ ಆತ್ಮವು ಬಿಂದುವಾಗಿದೆಯೋ ಹಾಗೆಯೇ ಪರಮಾತ್ಮನೂ ಬಿಂದುವಾಗಿದ್ದಾರೆ. ಒಂದುವೇಳೆ ಬೇರೊಂದು ಆತ್ಮವು ಬಂದರೆ ಅದರ ಪಕ್ಕದಲ್ಲಿ ಬಂದು ಹಾಗೆಯೇ ಕುಳಿತುಕೊಳ್ಳುವುದುತಾನೆ. ಬ್ರಾಹ್ಮಣನಲ್ಲಿ ಆತ್ಮನನ್ನು ಕರೆಸುತ್ತಾರೆ, ಆಗ ಆ ಆತ್ಮವು ಬಂದು ನಾನು ಇಂತಹ ಸ್ಥಳದಲ್ಲಿ ಜನ್ಮ ಪಡೆದುಕೊಂಡಿದ್ದೇನೆ ಎಂದು ಹೇಳುತ್ತದೆ ಎಂದು ಹೇಳುತ್ತದೆ ಅಂದಮೇಲೆ ಆ ಆತ್ಮವು ಬಂದು ಎಲ್ಲಿ ಕುಳಿತುಕೊಳ್ಳುತ್ತದೆ? ತಲೆಯಲ್ಲಿಯೇ? ಅವರಲ್ಲಿ ತನ್ನ ಆತ್ಮವೂ ಇದೆಯಲ್ಲವೆ. ತಂದೆಯು ತಿಳಿಸುತ್ತಾರೆ - ನಾನೂ ಸಹ ಬಿಂದುವಾಗಿದ್ದೇನೆ ಆದರೆ ನನಗೆ ಪರಮಪಿತ ಪರಮ ಆತ್ಮನೆಂದು ಹೇಳುತ್ತಾರೆ. ಅವರ ಮಹಿಮೆಯು ಅಪರಮಪಾರವಾಗಿದೆ. ಶಿವಾಯನಾಮಃ ಎಂದು ಯಾರು ಮಹಿಮೆ ಮಾಡಿದರು? ಆತ್ಮ ಸಾಲಿಗ್ರಾಮವು ಮಹಿಮೆ ಮಾಡುತ್ತದೆ. ಅಂದಮೇಲೆ ಅವಶ್ಯವಾಗಿ ಆತ್ಮವೇ ಬೇರೆಯಾಗಿದೆ, ಪ್ರಪಂಚದವರು ಈ ಮಾತುಗಳನ್ನು ಅರಿತುಕೊಂಡಿಲ್ಲ ಆದರೆ ನಿಮಗೆ ಗೊತ್ತಿದೆ - ಪರಮಾತ್ಮನ ಹೆಸರು ಶಿವ ಎಂದಾಗಿದೆ. ಬ್ರಹ್ಮಾ, ವಿಷ್ಣು, ಶಂಕರನನ್ನು ಬ್ರಹ್ಮ ದೇವತಾಯ ನಮಃ, ವಿಷ್ಣು ದೇವತಾಯ ನಮಃ....... ಆದರೆ ಅವರಿಗೆ ಶಿವ ಪರಮಾತ್ಮಾಯ ನಮಃ ಎಂದು ಹೇಳುತ್ತಾರೆ ಶಿವನು ಎಲ್ಲರಿಗಿಂತ ಶ್ರೇಷ್ಠರಾಗಿದ್ದಾರಲ್ಲವೆ. ಈ ಮಾತುಗಳನ್ನು ನೀವು ಅರಿತುಕೊಳ್ಳುತ್ತೀರಿ. ಈ ಜ್ಞಾನವೂ ಸಹ ನಿಮಗೆ ಈಗ ಇದೆ. ಇದು ನಿಮ್ಮ ವಜ್ರಸಮಾನ ಜನ್ಮವಾಗಿದೆ. ದೇವತೆಗಳಂತೂ ಪ್ರಾಲಬ್ಧವನ್ನು ಭೋಗಿಸುತ್ತಾರೆ ಈ ಪ್ರಾಲಬ್ಧವನ್ನು ನೀಡುವ ತಂದೆಯು ಅದ್ಭುತವಾಗಿದ್ದಾರೆ. ಇಂತಹ ಪಾರಲೌಕಿಕ ತಂದೆಯ ಪ್ರತಿ ಎಷ್ಟೊಂದು ಗೌರವವನ್ನಿಡಬೇಕು. ಬುದ್ಧಿಯೋಗವನ್ನು ಶಿವತಂದೆಯ ಜೊತೆ ಇಡಬೇಕಾಗಿದೆ. ಈ ಬ್ರಹ್ಮಾರವರೊಂದಿಗಲ್ಲ. ತಂದೆಯು ಬ್ರಹ್ಮಾರವರ ಮುಖಾಂತರ ಓದಿಸುತ್ತಾರೆ, ಈ ಶರೀರವನ್ನು ಬಾಡಿಗೆಗೆ ತೆಗೆದುಕೊಂಡಿದ್ದಾರೆ. ಇಡೀ ಸೃಷ್ಟಿಯಲ್ಲಿ ಇವರು ಎಷ್ಟು ದೊಡ್ಡ ಅತಿಥಿಯಾಗಿದ್ದಾರೆ, ಶಿವಬಾಬಾ ಪರಮಧಾಮದಿಂದ ಬರುತ್ತಾರೆ. ಅಂದಮೇಲೆ ಭಾರತದ ಎಷ್ಟು ದೊಡ್ಡ ಅತಿಥಿಯಾಗಿದ್ದರೆ. ಎಲ್ಲಿಂದ ಬಂದಿದ್ದಾರೆ? ಆ ಮಂತ್ರಿ ಮುಂತಾದವರಿಗೆ ಎಷ್ಟು ಗೌರವ ವಿರುತ್ತದೆ ಆದರೆ ಗುಪ್ತವೇಷದಲ್ಲಿ ಎಷ್ಟು ದೊಡ್ಡ ಅತಿಥಿಯು, ಪತಿತರನ್ನು ಪಾವನ ಮಾಡಲು ಬಂದಿದ್ದಾರೆ! ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಬೆಳಗ್ಗೆ-ಬೆಳಗ್ಗೆ ಎದ್ದು ನೆನಪಿನಲ್ಲಿ ಕುಳಿತು ಸಂಪಾದನೆಯನ್ನು ಜಮಾ ಮಾಡಿಕೊಳ್ಳಬೇಕಾಗಿದೆ. ತಮ್ಮೊಂದಿಗೆ ತಾವು ಮಾತನಾಡಿಕೊಳ್ಳಬೇಕಾಗಿದೆ. ಆತ್ಮಾಭಿಮಾನಿಗಳಾಗಬೇಕಾಗಿದೆ.

2. ರಾಜಯೋಗ, ಕರ್ಮಯೋಗವನ್ನು ಕಲಿಯಬೇಕು ಮತ್ತು ಕಲಿಸಬೇಕಾಗಿದೆ. ಎಂದೂ ಸಹ ಬೇಸರವಾಗಿ ವಿದ್ಯೆಯನ್ನು ಬಿಡಬಾರದು. ತಂದೆಯ ಪ್ರತಿ ಅವಶ್ಯವಾಗಿ ಗೌರವವನ್ನಿಡಬೇಕಾಗಿದೆ.

ವರದಾನ: ತಂದೆಯ ಸಮಾನ ಬೇಹದ್ದಿನ ವೃತ್ತಿಯನ್ನಿಡುವ ಮಾಸ್ಟರ್ ವಿಶ್ವ ಕಲ್ಯಾಣಕಾರಿ ಭವ.

ಬೇಹದ್ದಿನ ವೃತ್ತಿ ಅರ್ಥಾತ್ ಸರ್ವ ಆತ್ಮರ ಪ್ರತಿ ಕಲ್ಯಾಣದ ವೃತ್ತಿಯನ್ನಿಡುವುದು - ಇದೇ ಮಾಸ್ಟರ್ ವಿಶ್ವ ಕಲ್ಯಾಣಕಾರಿ ಆಗುವುದಾಗಿದೆ. ಕೇವಲ ತಮ್ಮ ಅಥವಾ ತಮ್ಮ ಅಲ್ಪಕಾಲಕ್ಕೆ ನಿಮಿತ್ತರಾಗಿರುವ ಆತ್ಮರ ಕಲ್ಯಾಣಾರ್ಥವಲ್ಲ. ಆದರೆ ಸರ್ವರ ಕಲ್ಯಾಣದ ವೃತ್ತಿಯಿರಲಿ. ಯಾರು ತಮ್ಮ ಉನ್ನತಿಯಲ್ಲಿ, ತಮ್ಮ ಪ್ರಾಪ್ತಿಯಲ್ಲಿ, ತಮ್ಮ ಪ್ರತಿ ಸಂತುಷ್ಟತೆಯಲ್ಲಿ ಖುಷಿಯಾಗಿದ್ದು ನಡೆಯುತ್ತಾರೆ, ಅವರು ಸ್ವ ಕಲ್ಯಾಣಿ ಆಗಿದ್ದಾರೆ. ಆದರೆ ಯಾರು ಬೇಹದ್ದಿನ ವೃತ್ತಿಯನ್ನಿಟ್ಟು ಬೇಹದ್ದಿನ ಸೇವೆಯಲ್ಲಿ ಇರುವವರಿಗೆ ಹೇಳುತ್ತಾರೆ - ತಂದೆಯ ಸಮಾನ ಮಾಸ್ಟರ್ ವಿಶ್ವ ಕಲ್ಯಾಣಕಾರಿಗಳು.

ಸ್ಲೋಗನ್: ನಿಂದಾ-ಸ್ತುತಿ, ಮಾನ-ಅಪಮಾನ, ಹಾನಿ-ಲಾಭದಲ್ಲಿ ಸಮಾನವಿರುವವರೇ ಯೋಗಿ ಆತ್ಮರಾಗಿದ್ದಾರೆ.